# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

GSTIN : 29AAALB0060D1ZS

ಸಂಖ್ಯೆ : ಬೆಂಅಪ್ರಾ/ನಯೋಸ/PRL-19/ 3041 /2023-24. ದಿನಾಂಕ :
No. E-Office No. 38575 Date : 26/03/2024

## ಕಾರ್ಯಾದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-A) ರಡಿಯಲ್ಲಿ]

ವಿಷಯ: ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ ನಂ. 34/1 ರಲ್ಲಿ 2ಎ-00ಗುಂ ಮತ್ತು ಸ ನಂ. 35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಅರ್ಜಿದಾರರಾದ ಶ್ರೀ.ಬಿ.ಕೆ.ಮಹೇಂದ್ರ ಮೋಹನ್, ಶ್ರೀ.ಬಿ.ಕೆ.ಹರೀಶ್, ಶ್ರೀ.ಬಿ.ಕೆ.ಸುರೇಂದ್ರನಾಥ್ ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ 07.09.2023.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 5.3.4/ 2023, ದಿನಾಂಕ 25.09.2023.
3. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-19/1619/2023-24, ದಿನಾಂಕ 03.11.2023.
4. ಕೆನರಾ ಬ್ಯಾಂಕ್ ಚಲನ್ ನಂ. GN23126898, ದಿನಾಂಕ 21.12.2023.
5. ಈ ಕಛೇರಿ ಅ.ಟಿ. ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-19/2022-23/2330/2023-24, ದಿನಾಂಕ 23.01.2024.
6. ಅಧಿಕ ಜಿಲ್ಲಾ ನೊಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ ಸಂಖ್ಯೆ BDA-1-03446-2023-24 ದಿನಾಂಕ 09.02.2024.

******

ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ ನಂ. 34/1 ರಲ್ಲಿ 2ಎ-00ಗುಂ ಮತ್ತು ಸ ನಂ. 35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಅರ್ಜಿದಾರರಾದ ಶ್ರೀ.ಬಿ.ಕೆ.ಮಹೇಂದ್ರ ಮೋಹನ್, ಶ್ರೀ.ಬಿ.ಕೆ.ಹರೀಶ್, ಶ್ರೀ.ಬಿ.ಕೆ.ಸುರೇಂದ್ರನಾಥ್ ರವರುಗಳು ಉಲ್ಲೇಖ [1] ರ ಅರ್ಜಿಯಲ್ಲಿ ಕೋರಿರುತ್ತಾರೆ.

ಉಲ್ಲೇಖ [2] ರಲ್ಲಿ ನಮೂದಿಸಿರುವ ದಿನಾಂಕ 20.03.2023 ರ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 3.3.11/2023 [illegible]

---

ಹಾಲಿ ರಸ್ತೆಯನ್ನು 18.0ಮೀ ಅಗಲಕ್ಕೆ ವಿಸ್ತರಿಸಿ ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಕರಡು ವಸತಿ ವಿನ್ಯಾಸ ನಕ್ಷೆ ಸಲ್ಲಿಸಿದ ನಂತರ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ.ನಂ.34/1 ರಲ್ಲಿ 2ಎ-00ಗುಂ ಮತ್ತು ಸ.ನಂ.35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು 'Demarcation and Development' ಉದ್ದೇಶಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು.

ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದ ಅನುಸಾರ ಲಗತ್ತಾಗಿರುವ ಹಾಲಿ ರಸ್ತೆಯನ್ನು 18.0ಮೀ ಅಗಲಕ್ಕೆ ವಿಸ್ತರಿಸಿ ಅರ್ಜಿದಾರರು ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಕರಡು ವಸತಿ ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ.

ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ [3] ರ ಈ ಕಛೇರಿ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ಒಟ್ಟು ₹.25,35,010/- [₹. ಇಪ್ಪತ್ತೈದು ಲಕ್ಷದ ಮುವತ್ತೈದು ಸಾವಿರದ ಹತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ತಿಳಿಸಲಾಗಿತ್ತು. ಉಲ್ಲೇಖ [4] ರಲ್ಲಿ ಪ್ರಾಧಿಕಾರದ ಕೆನರಾ ಬ್ಯಾಂಕ ಚಲನ್ ನಂ. GN23126898, ಮೂಲಕ ದಿನಾಂಕ 21.12.2023 ರಂದು ಅರ್ಜಿದಾರರು ಪಾವತಿಸಿರುತ್ತಾರೆ.

ಕರಡು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ, ರಸ್ತೆ ಮತ್ತು ರಸ್ತೆ ವಿಸ್ತರಣೆ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲು ಅರ್ಜಿದಾರರಿಗೆ ಮತ್ತು ಸದರಿ ಪ್ರದೇಶಗಳನ್ನು ಹಸ್ತಾಂತರಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು [ದಕ್ಷಿಣ ವಿಭಾಗ], ರವರಿಗೆ ಉಲ್ಲೇಖ [5] ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು. ಕರಡು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆ ವಿಸ್ತರಣೆ ಪ್ರದೇಶಗಳನ್ನು ಉಲ್ಲೇಖ (6) ರಲ್ಲಿ ದಿನಾಂಕ 09.02.2024 ರಂದು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ ನಂ. 34/1 ರಲ್ಲಿ 2ಎ-00ಗುಂ ಮತ್ತು ಸ ನಂ. 35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ ನಂ. 34/1 ರಲ್ಲಿ 2ಎ-00ಗುಂ ಮತ್ತು ಸ ನಂ. 35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಅರ್ಜಿದಾರರಾದ ಶ್ರೀ.ಬಿ.ಕೆ.ಮಹೇಂದ್ರ ಮೋಹನ್, ಶ್ರೀ.ಬಿ.ಕೆ.ಹರೀಶ್, ಶ್ರೀ.ಬಿ.ಕೆ.ಸುರೇಂದ್ರನಾಥ್ ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

| | |
|---|---|
| 1. | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ಅಧಿನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸುವುದು. |
| 2. | ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ಆದೇಶ ಸಂಖ್ಯೆ:ಎಎಲ್ ಎನ್ ಡಿ(ಎ)ಸಿ.ಆರ್/77/23-24 ದಿನಾಂಕ 26.07.2023 ರ ಆದೇಶದ ಷರತ್ತು ಸಂಖ್ಯೆ (6) ರಂತೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 71 ರಡಿ ಸಾರ್ವಜನಿಕ ಉದ್ದೇಶಕ್ಕೆ ಆದೇಶದಲ್ಲಿ ಮೀಸಲಿರಿಸಿರುವ ಪಥ ಬದಲಾವಣೆಯಂತೆ ಹೆಚ್ಚುವರಿ ವಿಸ್ತೀರ್ಣವನ್ನು ಅರ್ಜಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಪರಿತ್ಯಾಗ ಪತ್ರ (Relinquish Deed) ದಂತೆ ನೊಂದಣಿ ಮಾಡತಕ್ಕದ್ದು. |
| 3. | ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಾಗಲೀ / ಲೋಕಾಯುಕ್ತದಲ್ಲಾಗಲೀ ಯಾವುದೇ ವಿಚಾರಣಾ ಪ್ರಾಧಿಕಾರದಲ್ಲಾಗಲೀ ಪ್ರಕರಣ ದಾಖಲಾಗಿದ್ದಲ್ಲಿ ಅರ್ಜಿದಾರರೇ ಬಗೆಹರಿಸಿಕೊಳ್ಳತಕ್ಕದ್ದು. |
| 4. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಬದಲಾಯಿಸತಕ್ಕದ್ದಲ್ಲ. |
| 5. | ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |
| 6. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಉದ್ದೇಶಿತ ರಸ್ತೆಗಳು, ಮಹಾಯೋಜನೆ ರಸ್ತೆ ಪ್ರದೇಶ, ಉದ್ಯಾನವನ /ಬಯಲುಜಾಗಗಳು, ಪಬ್ಲಿಕ್ ಯುಟಿಲಿಟಿ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪುಕ್ಕಟೆಯಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದು. |
| 7. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿಗಾಗಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 8. | ಉದ್ಯಾನವನ ಮತ್ತು ಬಯಲುಜಾಗಗಳನ್ನು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆ ಪ್ರಕಾರ ಶೇ.100 ರಷ್ಟು ನಿವೇಶನಗಳ ಬಿಡುಗಡೆ ಕೋರುವ ಮೊದಲು Chain link Fencing ಮಾಡಿ ಹಾಗೂ ಅಭಿವೃದ್ಧಿಪಡಿಸುವುದು. |
| 9. | ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 10. | ಬಫರ್ ಪ್ರದೇಶದಲ್ಲಿ ಗಿಡ-ಮರಗಳನ್ನು ಬೆಳಸತಕ್ಕದ್ದು |
| 11. | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |

| | |
|---|---|
| 12. | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಪೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ತಾತ್ಕಾಲಿಕ ಅನುಮೋದನೆ ನೀಡಿರುವ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 13. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 14. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ವಸತಿ ಅಭಿವೃದ್ಧಿಗಳಿಂದ ಉತ್ಪಾದನೆಯಾಗುವ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿಗಳಾಗಿ ವಿಂಗಡಿಸಲು ಹಾಗೂ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 15. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವು ಮಾಡಿಕೊಡತಕ್ಕದ್ದು. |
| 16. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೂ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |
| 17. | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17-2ಬಿ ರನ್ವಯ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ, ಸಕ್ಷಮ ಪ್ರಾಧಿಕಾರಗಳಿಂದ ಸಿವಿಲ್, ವಿದ್ಯುತ್, ಒಳಚರಂಡಿ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಕುರಿತು ಪ್ರಮಾಣ ಪತ್ರಗಳೊಂದಿಗೆ ಕೋರಿಕೆ ಸಲ್ಲಿಸಿದಲ್ಲಿ ಅಂತಿಮ ವಸತಿ ವಿನ್ಯಾಸವನ್ನು ಮತ್ತು ವಸತಿ ನಿವೇಶನಗಳನ್ನು ಬಿಡುಗಡೆಗೊಳಿಸಲಾಗುವುದು. |
| 18. | ವಸತಿ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 19. | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. |
| 20. | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 21. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ, ಕುಡಿಯುವ ನೀರಿನ ಹಾಗೂ ಇತರೆ ಉಪಯೋಗದ ನೀರು ಸರಬರಾಜು ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಅಳವಡಿಸತಕ್ಕದ್ದು. |
| 22. | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಅದೇ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 23. | BESCOM ನಿರ್ದೇಶನದಂತೆ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ವಿದ್ಯುತ್ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. |

| | |
|---|---|
| 24. | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ.10 ರಷ್ಟು ವಸತಿ ನಿವೇಶನಗಳನ್ನು ಆರ್ಥಿಕ ಹಿಂದುಳಿದ ವರ್ಗದವರಿಗಾಗಿ (EWS) ಮತ್ತು ಕಡಿಮೆ ಆದಾಯ ವರ್ಗದವರಿಗಾಗಿ (LIG) ಕಾಯ್ದಿರಿಸಕ್ಕದ್ದು, ಆ ವರ್ಗದವರಿಗೆ ನಿವೇಶನವನ್ನು ಹಂಚಿಕೆ ಮಾಡತಕ್ಕದ್ದು. ಆರ್ಥಿಕ ದುರ್ಬಲ ವರ್ಗದವರಿಗಾಗಿ (EWS) ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದ್ದಲ್ಲಿ ಮೂಲ ಆಶಯ ವಿಫಲವಾಗುವುದರಿಂದ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ (EWS) ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 25. | BWSSB / KUWSDB/RWS, BESCOM ಇಲಾಖೆಗಳಿಂದ ಹಾಗೂ ಅಗತ್ಯಕ್ಕನುಗುಣವಾಗಿ KSPCB ರವರಿಂದ ಹಾಗೂ ಇತರೆ ಸಂಬಂಧಿತ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 26. | ಬಡಾವಣೆ ನಕ್ಷೆಯಲ್ಲಿ Transformer Yard, RWH, STP, OHT, SWM ಗಳಿಗಾಗಿ ಸೂಕ್ತ ಜಾಗಗಳನ್ನು ಕಾಯ್ದಿರಿಸಿದ್ದು ಇವುಗಳನ್ನು ಬದಲಾಯಿಸುವಂತಿಲ್ಲ ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 27. | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಮೇಲ್ಕಂಡ ಷರತ್ತುಗಳಿಗೊಳಪಡಿಸಿ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿತಿಪ್ಪಸಂದ್ರ ಗ್ರಾಮದ ಸ ನಂ. 34/1 ರಲ್ಲಿ 2ಎ-00ಗುಂ ಮತ್ತು ಸ ನಂ. 35/1 ರಲ್ಲಿ 3ಎ-03ಗುಂ, ಒಟ್ಟು 5ಎ-03ಗುಂ (01ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಇವರಿಗೆ,

ಶ್ರೀ.ಬಿ.ಕೆ.ಮಹೇಂದ್ರ ಮೋಹನ್, ಶ್ರೀ.ಬಿ.ಕೆ.ಹರೀಶ್,
ಶ್ರೀ.ಬಿ.ಕೆ.ಸುರೇಂದ್ರನಾಥ್
ನಂ. 190, ಎಂಎಂಆರ್ ಟವರ್, 4ನೇ ಮಹಡಿ,
23ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಸೆಕ್ಟರ್-3
ಹೆಚ್.ಎಸ್.ಆರ್, ಬೆಂಗಳೂರು-560 102.